ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್, ತಾರೀಖು 7ನೇ ಫೆಬ್ರವರಿ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ :—ಕಾನಕಾನಹಳ್ಳಿ ತಾಲ್ಲೂಕು ಬಾಣಂತಿ ಮಾರಿ ಸ್ಟೇಟ್ ಫಾರೆಸ್ಟ್ ನಲ್ಲಿ ಗುರ್ತುಮಾಡಿರುವ ಸೊಳ್ಳಿಹಳ್ಳವೆಂಬ ಕೂಪಿನಲ್ಲಿನ ಚೌಬೀನೆ ಮತ್ತು ಸೌದೆ ಗಿಡಗಳನ್ನು ಈ ಕೆಳಗೆ ನಮೂದಾಗುವ ಷರತ್ತು ಗಳಿಗೆ ಬಳಪಟ್ಟು ಕಡದು ಸಾಗಿಸಿಕೊಳ್ಳುವ ಹಕ್ಕುದಾರಿಯು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಅಥವಾ ರೇಂಜ್ ಫಾರೆಸ್ಟ್ ಆಫಿಸರವರಿಂದ 1903ನೇ ಇಸವಿ ಫೆಬ್ರವರಿ 21ನೇ ತಾರೀಖು ದಿವಸ ಕಾನಕಾನಹಳ್ಳಿಯಲ್ಲಿ ಬಹಿರಂಗವಾಗಿ ಪರಾಜು ಹಾಕಲ್ಪಡುವದು.

2. ಈ ಪರಾಜು ಫಾರೆಸ್ಟ್ ಕನ್‌ಸರ್ವೇಟರ್ ಸಾಹೇಬರವರ ಮಂಜೂರಾತಿಗೆ ವಳಪಟ್ಟು ಇರುತ್ತೆ.

3. ಸವಾಲುಗಳು ಬಂದದ್ದನ್ನು ಅಂಗೀಕರಿಸುವದಕ್ಕೂ ಅಥವಾ ಯಾವಕಾರಣವು ಹೇಳದೆ ತಿರಸ್ಕರಿಸುವದಕ್ಕೂ ಪರಾಜು ಕೈಮು ನಡಿಸುವ ಫಾರೆಸ್ಟ್ ಆಫಿಸರವರಿಗೆ ಅಧಿಕಾರವಿರುತ್ತೆ.

4. ಸವಾಲ್‌ದಾರನು ಸವಾಲ್ ಮಾಡುವದಕ್ಕೆ ಮುಂಜೆಯೇ 15 ರೂಪಾಯಿಗಳು ಡಿಪಾಜಿಟ್ಟು ಹಾಜರ್ಮಾಡಬೇಕು. ಆ ಮೊಬಲಗು ಮಂಜೂರಾದ ಸವಾಲ್‌ದಾರನ ಹೊರ್ತು ಪರಾಜು ಖೈದಾದ ಮೇಲೆ ವಾಪಸು ಮಾಡಲ್ಪಡುವದು. ಆ ಮೊಬಲಗನ್ನು ಮತ್ತು ಷರತ್ತು ಮೇರೆ ನಡಿಯಲು ಮಂಜೂರಾದ ಸವಾಲ್‌ದಾರನು ಇಡಬೇಕಾದ 35 ಜುವ್ವಾ 50 ರೂಪಾಯಿಗಳನ್ನು ಗಾರ್ನವ್ಮೆಂಟ್ ನೇ ವಿಂಗ್ಸ್‌ಬ್ಯಾಂಕಿನಲ್ಲಿ ಇಡುತ್ತೆ.

5. ಪರಾಜು ಮಂಜೂರಾತಿ ತಿಳಿಸಿದ ಬಂದು ವಾರದೊಳಗಾಗಿ ಮುಂಜೂರಾದ ಸವಾಲ್‌ದಾರನು ಸರಿಯಾದ ಸ್ಟ್ಯಾಂಪು ಕಾಗದದಲ್ಲಿ ಈ ಕೆಳಗಿನ ಷರತ್ತು ಪ್ರಕಾರ ನಡಿಯಲು ಮುಚ್ಚಳಿಕೆ ಬರದುಕೊಡಬೇಕು. ತಪ್ಪಿದಲ್ಲಿ ಕೂಪನ್ನು ಪುನಃ ಪರಾಜು ಮಾಡಿಸಲಾದೀತು. ದುಸರೆ ಪರಾಜಿನಲ್ಲಿ ಏನಾದರೂ ಲುಕ್ಸಾನ್ ಬಂದರೆ ಮೊದಲಿನ ಪರಾಜುದಾರನು ಭರ್ತಿಮಾಡಿಕೊಡಬೇಕು. ಆದರೇ ಏನಾದರೂ ಜಾಸ್ತಿ ಬಂದರೆ ಹಿಸ್ಸೆ ದೊರೆಯಲಾರದು.

ಷರತ್ತುಗಳು.

1. ಸಂದಲ್ ಗಿಡಗಳು, ಗುರ್ತುಮಾಡಿಯಿರುವ ಮರಗಳು ಮತ್ತು ಸೊಸಿಗಳು ಅಂದರೆ ಸುತ್ತಳತೆ ಬಂಡಡಿ ವಳಗಿರುವ ಗಿಡಗಳು ಇವುಗಳನ್ನು ಬಿಟ್ಟು ಯಲ್ಲಾ ಗಿಡಗಳನ್ನು ಭೂಮಿಮಟ್ಟಕ್ಕೆ ಸರಿಯಾಗಿ ಕತರಾಯಿಸಿಕೊಳ್ಳಬೇಕು.

2. ಸೌದೆ ಮತ್ತು ಚೌಬೀನೆ ಗಿಡಗಳು ಕಡಿಯುವಾಗ ಅಥವಾ ಗಾಡಿಯಲ್ಲಿ ಸಾಗಿಸುವಾಗ ಯಾವದಾದರೂ ಸಂದಲ್ ಗಿಡಕ್ಕೆ ಉಪಹತಿ ವುಂಟಾದರೆ ಕಂಟ್ರಾಕ್ಟ್‌ದಾರನು ಫಾರೆಸ್ಟ್ ಆಫಿಸರವರು ಗೊತ್ತುಮಾಡುವ ಲುಕ್ಸಾನ್ ಮೊಬಲಗನ್ನು ಸರ್ಕಾರಕ್ಕೆ ಪಾವತಿ ಮಾಡಬೇಕು.

3. ತಂಗಡಿ ಮತ್ತು ಕಕ್ಕೆ ಇವುಗಳು ಈ ಪರಾಜಿನಲ್ಲಿ ಕೇರಿ ಇಲ್ಲ. ಅಲ್ಲದೆ ಫಲಗಳು ಬಿಡುವ ಮರಗಳು ಇತರ ಪಸಾರೆ ಬಾಬುಗಳು ಮತ್ತು ಹುಲ್ಲು ಇದು ಯಾವದೂ ಪರಾಜಿಗೆ ಕೇರಿಯಿಲ್ಲಾ. ಯಾವದಾದರೂ ಮರಗಳನ್ನು ಮನ್ಮಾನಿಯಾಗಿ ಕಡದರೆ ಅಂಥಾದ್ದೆಲ್ಲಾ ಇಲಾಖಾ ಮೂರೀಪತ್ತು ಕಾಲ್ಸ್ ಮಾಡಿಸಿ ತಗಲುವ ಲಾಗೋಡನ್ನು 50 ಐವತ್ತು ರೂಪಾಯಿನ ಸೆಕ್ಯೂರಿಟಿ ಹಣದಿಂದ ವಸೂಲ್ಮಾಡತ್ತೆ.

4. ಚೌಬೀನೆ ಮತ್ತು ಸೌದೆ ಕತ್ರಾವಣಿ ಮತ್ತು ಸಾಗಿಸತಕ್ಕದ್ದನ್ನೆಲ್ಲಾ 1903ನೇ ಜೂ 30ರ ವಳಗೆ ಪೂರೈಸಿಕೊಳ್ಳಬೇಕು. ಹಾಗೆಮಾಡದೇ ಇದ್ದರೆ ಕಂಟ್ರಾಕ್ಟ್‌ದಾರನು ಖಾತರಿಗಾಗಿ ಕೊಟ್ಟಯಿರುವ ಮೊಬಲಗನ್ನು ಸರ್ಕಾರಕ್ಕೆ ಕೇರಿಸಿಕೊಳ್ಳುವದಲ್ಲದೆ ಮೇಲ್ಕಂಡ ಚೌಬೀನೆ ಸೌದೆ ಕತ್ರಾವಣಿ ಮಾಡಿಕೊಳ್ಳುವ ಹಕ್ಕುದಾರಿಯು ಸಹಾ ಆ ತಾರೀಖಿನಿಂದ ರದ್ದಾಗಿ ಇರುತ್ತೆ.

5. ಕಂಟ್ರಾಕ್ಟ್‌ದಾರನು ಚೌಬೀನೆ ಮತ್ತು ಸೌದೆ ಖಾಯಿಷ್ ಮಾಡುವ ಪೊತ್ತಕ್ಕೆ ಹಾಸಲ್ ಪಾವತಿ ಮಾಡಿದನಂತರ ರೇಂಜ್ ಫಾರೆಸ್ಟ್ ಆಫಿಸರವರು ಬಾಬು ರೂಢಿಸುವದಕ್ಕೆ ಲೈಸೆನ್ಸು ಕೊಡುತ್ತಾರೆ ಸದರಿ ಕೂಪಿನಿಂದ ರೂಢಿಸಿದ ಬಾಬು ಕೂಪಿನಿಂದ ಸಾಗಿಸುವದಕ್ಕೆ ಫಾರೆಸ್ಟರು ರಹದಾರಿ ಕೊಡುತ್ತಾರೆ.

6. ಕೂಪಿನಿಂದ ಸೌದೆ ಮತ್ತು ಚೌಬೀನೆಯನ್ನು ಯಾವ ದಿವಸವೂ ಸೂರ್ಯೋದಯಕ್ಕೆ ಮುಂಚೆ ಅಥವಾ ಸೂರ್ಯಾಸ್ತಮಯವಾದ ಮೇಲೆ ಸಾಗಿಸಕೂಡದು. ಕತ್ರಾವಣಿ ಕೆಲಸಕ್ಕಾಗಿ ಕೊಟ್ಟಯಿರುವ ಕೂಪಿನಲ್ಲಿ ಆಸಲ್ ಅಥವಾ ಸೌದೆಗಾಡಿ ವಾಗರ್ದೆಲ್ಲಿ ಅಗಲಿ ಬೇಸಿಗೆಕಾಲದಲ್ಲಿ ಅಂದರೆ 1903ನೇ ಫೆಬ್ರವರಿ 1ರ ಲಾಗಾಯತು 1903ನೇ ಮೇ 31ರ ವರಿಗೆ ಏನಾದರೂ ಬೆಂಕಿ ಬಿದ್ದು ಅದು ಕಂಟ್ರಾಕ್ಟ್‌ದಾರನ ಅಥವಾ ಆತನಕಡೆ ಜನರ ಅಜಾಗ್ರತೆಯಿಂದ ವುಂಟಾದ್ದೆಂದು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಕಾಣಬಂದರೆ ಅದಕ್ಕೆ ಕಂಟ್ರಾಕ್ಟ್‌ದಾರನೇ ಜವಾಬ್ ಮಾಡಬೇಕು.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 29ನೇ ಜನವರಿ 1903ನೇ ಇಸವಿ.

ಇದರಿಂದ ತಿಳಿಯಪಡಿಸುವದೇನಂದರೆ :—ಹಾಸನ ಡಿಸ್ಟ್ರಿಕ್ಟ್ ಅರಿಸೀಕೆರೆ ರೇಂಜ್ ಫಾರೆಸ್ಟ್ ಆಫಿಸರವರ ಲೆಖ್ಖದಲ್ಲಿ ಈ ರೇಂಜ್ ಬಾಬತು ಮಾರ್ಜಿನ್ನಿನಲ್ಲಿ ಕಂಡ ಹೆಸರಿನ ನಾಕರರ ಹಲಬು ರೂ. 3—11—11 ಪಾವತೀ ಇಲ್ಲದೇ ಬಾಕೀಯಲ್ಲಿರುವಂತೆ ತಿಳಿ ಯಬಂದಿರುತ್ತೆ ಯಾಗಿ ಈ ಲಾಗಾ ಯಿತು ಬಂದು ತಿಂಗಳು ವಾಯಿ ದೆಯಲ್ಲಿ ಈ ತಲಬಿಗೆ ಇರತಕ್ಕ ಹಕ್ಕನ್ನು ತಿಳಿಯಪಡಿಸದೇ ಇರುವ ಭಾಗದಲ್ಲಿ ಸದರೀ ಮೊಬಲಗನ್ನು ಸರ್ಕಾರಕ್ಕೆ ಆರ್ಯ ಜಮೆಗೆ ತಂದುಕೊಳ್ಳುವದರಲ್ಲಿ ಬರುತ್ತೆ. ತಿಳಿಯುವದು.

ಹೆಸರು.	ಮಾಹೆ.	ಮೊಬಲಗು.
ಕರಿಯಾ	1902ನೇ ಆಗಸ್ಟ್	2—15—0
ನಂಜಾ	1900ನೇ ಅಕ್ಟೋಬರ್	0—12—11
ಅಂತು ...		3—11—11

ವೈ. ಸೀತಾರಾಮಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಹಾಸನ ಡಿಸ್ಟ್ರಿಕ್ಟ್.

ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ.

ಬೆಂಗಳೂರ್, ತಾರೀಖು 2ನೇ ಫೆಬ್ರವರಿ 1903.

ಸರ್ವಿಸ್ ರಿಜಿಸ್ಟ್ರರ್‌ಗಳು ಈಗತಾನೆ ಗೌರ್ನಮೆಂಟ್ ಸೆಂಟ್ರಲ್ ಪ್ರೆಸ್‌ನಿಂದ ತಲ್ಪಿರುವದ್ದರಿಂದ ಪ್ರತಿ ಬಂದಕ್ಕೆ ಅರ್ಧಾಣೆ ಮೇರೆ ಹಾಲಿ ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋವಿನಲ್ಲಿ ಮಾರಾಟಕ್ಕೆ ಸಿದ್ಧವಾಗಿರುತ್ತೆಂದು ಇದರಿಂದ ಪ್ರಸಿದ್ಧಪಡಿಸಿದೆ.

ನೋಟಿಸ್. ಬೆಂಗಳೂರು, ತಾರೀಖು 7ನೇ ಫೆಬ್ರವರಿ 1903.

1903ನೇ ಇಸವಿ ಲೋವರ್ ಸೆಕಂಡರೀ ಪರೀಕ್ಷೆಗೆ ನೇಮಕವಾಗಿರುವ ಹೊಸ ಪದ್ಯಸಾರವು (Iನೇ ಭಾಗ) ಬೆಂಗಳೂರ್ ಗೌರ್ನಮೆಂಟ್ ಸೆಂಟ್ರಲ್ ಬುಕ್‌ಡಿಪೋವಿನಲ್ಲಿ ಬಿಕರಿಗೆ ಸಿದ್ಧವಾಗಿರುತ್ತೆ. ಅದರ ಖರೀದಿ ಪ್ರತಿ 1ಕ್ಕೆ 5 ಆಣೆಗಳು.

ಎಸ್. ಅಬ್ದುಲ್ ಹೈ,
ಕ್ಯೂರೇಟರ್.